ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಸಿರುಗುಪ್ಪ

ಕ್ರಿಮಿನಲ್ ಸಂಖ್ಯೆ 106/2024

**ಪಿರ್ಯಾದಿಃ** ಸರಕಾರದ ಪರ ಸಬ್ ಇನ್ಸ್‌ಪೆಕ್ಟರ್ ಆಫ್ ಪೊಲೀಸ್, ತೆಕ್ಕಲಕೋಟೆ ಪೊಲೀಸ್ ಠಾಣೆ.

-ವಿರುದ್ಧ-

ಆರೋಪಿತರು ಃ

ಎ1) ಮಂಜುನಾಥ ಎನ್. ಬಿನ್ ಹನುಮಣ್ಣ, ವಃ 30 ವರ್ಷ,

ಎ2) ಶ್ರೀಮತಿ ಲಕ್ಷ್ಮಿದೇವಿ ಕೋಂ ಹನುಮಣ್ಣ, ವಃ 60 ವರ್ಷ,

ಇಬ್ಬರ ವಾಸಃ ಉಪ್ಪಾರ್ ಹೊಸಳ್ಳಿ ಗ್ರಾಮ, ಸಿರುಗುಪ್ಪ ತಾಃ ಬಳ್ಳಾರಿ ಜಿಃ

## ದೋಷಾರೋಪಣೆ

ನಾನು ಅಶೋಕ್ ಆರ್.ಹೆಚ್., ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿರುಗುಪ್ಪ ಈ ಮೂಲಕ ನಿಮ್ಮ ಮೇಲೆ ಹೊರೆಸುವ ಆರೋಪಣೆ ಏನೆಂದರೆಃ

ದಿನಾಂಕ 30-11-2023 ರಂದು ಸಾಯಂಕಾಲ 6.00 ಗಂಟೆ ಸುಮಾರಿಗೆ ತೆಕ್ಕಲಕೋಟೆ ಪೊಲೀಸ್ ಠಾಣಾ ಸರಹದ್ದಿನ ಉಪ್ಪಾರು ಹೊಸಳ್ಳಿ ಗ್ರಾಮದ ನಿವಾಸಿಯಾದ ಚಾಸಾ-1 ರವರ ಮಕ್ಕಳು ಪಟಾಕಿಗಳನ್ನು ಹಚ್ಚುತ್ತಿದ್ದಾಗ ಆರೋಪಿಯಾದ ನೀವು ಮಕ್ಕಳಿಗೆ ಪಟಾಕಿಗಳನ್ನು ಹಚ್ಚಬೇಡರಿ ಎಂದು ಅವಾಚ್ಯ ಶಬ್ದಗಳಿಂದ ಬೈದು, ಅವಮಾನ ಮಾಡಿ ಆ ಮೂಲಕ ಅವರಿಗೆ ಉದ್ರೇಕವನ್ನುಂಟು ಮಾಡಿದರೆ ಅಂತಃ ಉದ್ರೇಕದಿಂದ ಅವರು ಶಾಂತಿ ಭಂಗವನ್ನು ಉಂಟು ಮಾಡಲೆಂಬ ಅಥವಾ ಇತರೆ ಯಾವುದೇ ಅಪರಾಧವನ್ನು ಮಾಡಲೆಂಬ ಉದ್ದೇಶದಿಂದ ದುರ್ಭಾಷೆಗಳಿಂದ ಬೈದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ **504** ಸಹವಾಚಕ ಕಲಂ **34** ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯಲ್ಲಿ ಅಪರಾಧ ಮಾಡಿರುತ್ತೀರಾ ಎಂದು ಆರೋಪ ಮಾಡಲಾಗಿದೆ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಈ ಮೇಲೆ ತಿಳಿಸಿದ ಆರೋಪಿತರಾದ ನೀವು ಏಕೋದ್ದೇಶದಿಂದ ಚಾಸಾ-2 ರವರು ಆರೋಪಿತನಿಗೆ ಏಕೆ ಒಡೆಯುತ್ತೀಯಾ ಎಂದು ಹೇಳುತ್ತಿರುವಾಗ 1 ನೇ ಆರೋಪಿಯು 2 ನೇ ಆರೋಪಿಯೊಂದಿಗೆ ಸೇರಿಕೊಂಡು ಚಾಸಾ-1 ರವರಿಗೆ ಜೋರಾಗಿ ಹೊಡೆದಿದ್ದಲ್ಲದೆ, 1 ನೇ ಆರೋಪಿಯು ಸಹ ಚಾಸಾ-1 ರವರ ಎಡಗಾಲನ್ನು ತುಳಿದು ತಲೆಯನ್ನು ಬಗ್ಗಿಸಿ ಹೊಡೆದಿದ್ದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ **323** ಸಹವಾಚಕ ಕಲಂ **34** ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯಲ್ಲಿ ಅಪರಾಧ ಮಾಡಿರುತ್ತೀರಾ ಎಂದು ಆರೋಪ ಮಾಡಲಾಗಿದೆ.

ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಈ ಮೇಲೆ ತಿಳಿಸಿದ ಆರೋಪಿತರಾದ ನೀವು ಏಕೋದ್ದೇಶದಿಂದ ಅವಾಚ್ಯ ಶಬ್ದಗಳಿಂದ ಬೈದಾಡಿದ್ದಲ್ಲದೆ, ಚಾಸಾ-1 ರವರು ಆರೋಪಿತನಿಗೆ ಅಣ್ಣ ಮಕ್ಕಳಿಗೆ ಏಕೆ ಬೈದೆ ಎಂದು ಕೇಳಿದಾಗ ಆರೋಪಿತನು

ಏಕಾಏಕಿ ಬಂದವನೇ ನಿನ್ನನ್ನು ಸಾಯಿಸುತ್ತೇನೆ ಎಂದು ಬಟ್ಟೆಯನ್ನು ಎಳೆದಾಡಿ ಒಡೆದು ಅವಮಾನ ಮಾಡಿದ್ದು , ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ 354 ಸಹವಾಚಕ 34 ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯಲ್ಲಿ ಅಪರಾಧ ಮಾಡಿರುತ್ತೀರಾ ಎಂದು ಆರೋಪ ಮಾಡಲಾಗಿದೆ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಈ ಮೇಲೆ ತಿಳಿಸಿದ ಆರೋಪಿತರಾದ ನೀವು ಏಕೋದ್ದೇಶದಿಂದ ಚಾಸಾ-1 ರವರಿಗೆ ಜೀವ ಬೆದರಿಕೆ ಹಾಕಿದ್ದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ **506** ಸಹವಾಚಕ ಕಲಂ **34** ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯಲ್ಲಿ ಅಪರಾಧ ಮಾಡಿರುತ್ತೀರಾ ಎಂದು ಆರೋಪ ಮಾಡಲಾಗಿದೆ.

(ಅಶೋಕ್ ಆರ್.ಹೆಚ್.)
ಪ್ರ.ದ.ನ್ಯಾದಂ., ಸಿರುಗುಪ್ಪ.

**ದಿನಾಂಕಃ** 08.01.2026

ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಸಿರುಗುಪ್ಪ

ಕ್ರಿಮಿನಲ್ ಸಂಖ್ಯೆ 106/2024

**ಫಿರ್ಯಾದಿಃ** ಸರಕಾರದ ಪರ ಸಬ್ ಇನ್ಸ್‌ಪೆಕ್ಟರ್ ಆಫ್ ಪೊಲೀಸ್, ತೆಕ್ಕಲಕೋಟೆ ಪೊಲೀಸ್ ಠಾಣೆ.

-ವಿರುದ್ಧ-

**ಆರೋಪಿತರು** ಃ

ಎ1) ಮಂಜುನಾಥ ಎನ್. ಮತ್ತು ಇನ್ನೊಬ್ಬ

**ಆರೋಪಣೆ**

ಪ್ರಶ್ನೆ ಃ **ಇದೀಗ ನಿಮಗೆ ಓದಿ ಹೇಳಿದ ಆಪಾದನೆ ತಿಳಿಯಿತೇ?**

ಉತ್ತರಃ **ಆ-**1

**ಆ-**2

ಪ್ರಶ್ನೆ ಃ **ನೀವು ತಪ್ಪೊಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ಪರ ಪ್ರತಿರಕ್ಷಣೆ ಏನಾದರೂ ಇದೆಯೇ?**

ಉತ್ತರಃ **ಆ-**1

**ಆ-**2

**(ಮೇಲಿನ ಆರೋಪಿತರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಸದರಿ ಆರೋಪಿತರಿಂದ ಪಡೆದಿದ್ದು, ಅದು ಸತ್ಯಾಂಶವನ್ನು ಹೊಂದಿದೆಯೆಂದು ಪ್ರಮಾಣೀಕರಿಸಲಾಗಿದೆ).**

**ದಿನಾಂಕಃ** 08.01.2026. **ಪ್ರ. ದ. ನ್ಯಾ. ದಂ., ಸಿರುಗುಪ್ಪ.**